ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ರವರ ಕಚೇರಿ
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)
ಕಾ & ಪಾ ಉಪ ವಿಭಾಗ, ಹೆಸ್ಕಾಂ ಗುಳೇದಗುಡ್ಡ

HUBBALLI ELECTRICITY SUPPLY COMPANY LTD
(Wholly owned the Govt. of Karnataka undertaking)
Office of the
AsstExecutive Engineer (Ele)
O&MSub Division, HESCOM, **Guledagudd**
e-mail: aeeggda.hescom@gmail.com

**Corporate Identity Number (CIN): U31401KA2002SGC030437**

No. GLD/AEE/AAO/20-21/ 2703-11 Date: 28-09-2020

## -:ಸಭೆಯ ನಡಾವಳಿಗಳು:-

*****

ದಿನಾಂಕ:24.09.2020 ರಂದು ಬೆಳ್ಳಗ್ಗೆ 10:00 ಗಂಟೆಗೆ ಕಾರ್ಯ ಮತ್ತು ಪಾಲನೆ ಉಪ ವಿಭಾಗ ಹು.ವಿ.ಸ.ಕಂ.ನಿ ಕಛೇರಿಯ ಗುಳೇದಗುಡ್ಡದಲ್ಲಿ ಬರುವ ಶ್ರೀ ವಾಸವಿ ಕಲ್ಯಾಣ ಮಂಟಪ ಗ್ರಾಹಕರ ಕುಂದು ಕೊರತೆ ನಿವಾರಣಾ ಸಭೆಯು ಕಂದಾಯ/ತಾಂತ್ರಿಕ ಸಿಬ್ಬಂಧಿಗಳು, ಉಪ ವಿಭಾಗಕ್ಕೆ ಸಂಬಂಧಿಸಿದ ಎಲ್ಲ ಶಾಖೆಯ ಶಾಖಾಧಿಕಾರಿಗಳು, ಗುಳೇದಗುಡ್ಡ ಪಟ್ಟಣದ ಗ್ರಾಹಕರು ಹಾಗೂ ಪತ್ರಕಿಯ ಮಾಧ್ಯಮದವರಗಳನ್ನು ಒಳಗೊಂಡ ಸಭೆಯು ಮಾನ್ಯ ಅಧೀಕ್ಷಕ ಅಭಿಯಂತರರು(ವಿ) ಕಾ ಮತ್ತು ಪಾ ವೃತ್ತ ಕಚೇರಿರವರ ಅಧ್ಯಕ್ಷತೆಯಲ್ಲಿ ಮತ್ತು ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಕಾ ಮತ್ತು ಪಾ ವಿಭಾಗ ಕಚೇರಿ ಬಾಗಲಕೋಟ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ತಾ) ಕಾರ್ಯ ಮತ್ತು ಪಾಲನೆ ಉಪ ವಿಭಾಗ ಹು.ವಿ.ಸ.ಕಂ.ನಿ ಗುಳೇದಗುಡ್ಡ ಇವರ ನೇತೃತ್ವದಲ್ಲಿ ಸಭೆ ಜರುಗಿಸಲಾಯಿತು.

**ಸಭೆಗೆ ಹಾಜರಿದ್ದ ಅಧಿಕಾರಿಗಳು/ನೌಕರರು**

1) ಶ್ರೀ ಕೆ.ಜಿ.ಹಿರೇಮಠ ಅಧೀಕ್ಷಕ ಅಭಿಯಂತರರು (ವಿ) ವೃತ್ತ ಕಚೇರಿ ಹೆಸ್ಕಾಂ, ಬಾಗಲಕೋಟ(ಸಭೆಯ ಅಧ್ಯಕ್ಷರು)
2) ಶ್ರೀ ಬಾಲಚಂದ್ರ ಹಲಗತ್ತಿ ಕಾರ್ಯನಿರ್ವಾಹಕ ಅಭಿಯಂತರರು(ವಿ) ಹೆಸ್ಕಾಂ ವಿಭಾಗ ಬಾಗಲಕೋಟ..
3) ಶ್ರೀ ಪ್ರಕಾಶ ಮೊಚಗುಂಡಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಹೆಸ್ಕಾಂ ಗುಳೇದಗುಡ್ಡ.
4) ಶ್ರೀ ಎಮ್.ಎಸ್.ಬಾದವಾಡಗಿ ಜೆ.ಟಿ.ಎ ಹೆಸ್ಕಾಂ ಉಪ ವಿಭಾಗ ಗುಳೇದಗುಡ್ಡ.
5) ಶ್ರೀ ಎಸ್.ಎಚ್.ಹಿರೆಮಠ ಶಾಖಾಧಿಕಾರಿಗಳು ಹೆಸ್ಕಾಂ ಶಾಖೆ ಗುಳೇದಗುಡ್ಡ.
6) ಶ್ರೀ ಬಿ.ಪಿ.ಕೊಳ್ಳಿ ಶಾಖಾಧಿಕಾರಿಗಳು ಹೆಸ್ಕಾಂ ಕಟಗೇರಿ.
7) ಶ್ರೀ ಸಿ.ವಾಯ್.ಕೊಂತ ಶಾಖಾಧಿಕಾರಿಗಳು ಹೆಸ್ಕಾಂ ಕುಳಗೇರಿ.
8) ಶ್ರೀ ಕೆ.ಐ.ಮಾಸ್ತಿ ಶಾಖಾಧಿಕಾರಿಗಳು ಹೆಸ್ಕಾಂ ಕೆರೂರು
9) ಶ್ರೀ ಎಸ್.ಎಸ್.ಕೋನೇರಿ ಶಾಖಾಧಿಕಾರಿಗಳು ಹೆಸ್ಕಾಂ ಬೇಲೂರು.
10) ಶ್ರೀ. ಪಿ.ಬಿ.ಮಡ್ಡನ್ನವರ ಎಇ(ಇ)ಹೆಸ್ಕಾಂ ಬಾದಾಮಿ
11) ಶ್ರೀ. ಸಿ.ಬಿ.ಕಲ್ಲಾಪುರ ಜೆಇ(ಇ) ಹೆಸ್ಕಾಂ ನಂದಿಕೇಶ್ವರ
12) ಶ್ರೀ ಎಸ್.ಕೆ.ಬೊಂಬ್ಲೆ ಹಿರಿಯ ಸಹಾಯಕ ಹೆಸ್ಕಾಂ ಬಾದಾಮಿ.
13) ಗುಳೇದಗುಡ್ಡ ಉಪ ವಿಭಾಗದ ಎಲ್ಲ ಕಂದಾಯ ಹಾಗೂ ತಾಂತ್ರಿಕ ಸಿಬ್ಬಂಧಿ ವರ್ಗದವರು.

**ಸಭೆಯಲ್ಲಿ ಗ್ರಾಹಕರ ಜೋತೆಗೆ ಚರ್ಚಿಸಿದ ಕುಂದು ಕೊರತೆಗಳ ವಿಷಯಗಳು ಇಂತಿವೆ:**

1. **ಚಂದ್ರಶೇಖರ ತಾಂಡೂರು:-** ಸದರಿ ಗ್ರಾಹಕರು ಗುಳೇದಗುಡ್ಡ ವ್ಯಾಪ್ತಿಗೆ ಬರುವ ಒಂದು ಕೋಳಿ ಫಾರಮ ವ್ಯಾಪರಸ್ಥವಾಗಿದ್ದು ಇವರರಿಗೆ ವ್ಯಾಪರ ಮಾಡಲು ವಿದ್ಯುತ್ ಲೋಡ್ ಸರಿಯಾಗಿ ಬರದೇ ಇರುವ ಕಾರಣ ತೊಂದರೆ ಉಂಟಾಗುತ್ತಿದೆ ಎಂದು ತಿಳಿಸಿರುತ್ತಾರೆ. ಮತ್ತು ವಿದ್ಯುತ್ ವ್ಯತಯ ಉಂಟಾಗುತ್ತಿದೆ ಎಂದು ತಿಳಿಸಿರುತ್ತಾರೆ. ಹಾಗೂ ಸದರಿ ಕೋಳಿ ಫಾರಮಗೆ ಗ್ರಾಮೀಣ ವಿದ್ಯತ್ ಫೀಡರ್‌ನಿಂದ ವಿದ್ಯುತ್ ಲೈನ್ ನೀಡಿತ್ತಿದ್ದು ಇದರಿಂದ ತೊಂದರೆ ಉಂಟಾಗುತ್ತಿದೆ, ಆದ ಕಾರಣ ಸಿ.ಟಿ ಫೀಡರ್‌ನಿಂದ ವಿದ್ಯುತ್ ಲೈನ್ ನೀಡಬೇಕೆಂದು ವಿನಂತಿಸಿರುತ್ತಾರೆ.
   - **ಸದರಿ ವ್ಯಾಪ್ತಿಗೆ ಬರುವ ಎಲ್ಲ ಕೋಳಿ ಫಾರಮ್‌ಗಳಿಗೆ ನೀಡಿರುವ ವಿದ್ಯುತ್ ಮಾರ್ಗಗಳನ್ನು ಪರೀಶಿಲಿಸಿ ಸಂಬಂಧಪಟ್ಟ ಶಾಖಾಧಿಕಾರಿಗಳ ಜೋತೆಗೆ ಚರ್ಚಿಸಿ ಪರ್ಯಾಯ ಮಾರ್ಗದಿಂದ ವಿದ್ಯತ್‌ನ್ನು ನೀಡುವದಾಗಿ ತಿಳಸಲಾಗಿದೆ.**
2. **ಶೋಭಾ ಯರಗಾ:-** ಸರ್ವೆ ನಂ 9/26/2 ಪ್ಲಾಟ್‌ನಂ 47 ಮೂಕೇಶ್ವೇರಿ ನಗರದ ನಿವಾಸಿಯಾಗಿದ್ದು 11 ಕೆವಿ ನಮ್ಮ ಮನೆಯ ಮೇಲೆ ವಿದ್ಯುತ್ ವಾಹಕಯು ಹಾದೂ ಹೋಗಿರುತ್ತದೆ ಎಂದು ತಿಳಿಸಿರುತ್ತಾರೆ, ವಿದ್ಯುತ್ ವಾಹಕವನ್ನು ಬೇರೆಕಡೆಗೆ ಸ್ಥಳಾಂತರಿಸಬೇಕೆಂದು ವಿನಂತಿಸಿರುತ್ತಾರೆ.
   - **ವಿದ್ಯುತ್ ಕಂಬ ಹಾಗೂ ವಿದ್ಯುತ್ ವಾಹಕ ಎಳೆಯುವ ಮುಂಚೆ ಸದರಿ ಸ್ಥಳದಲ್ಲಿ ಯಾವುದೇ ರೀತಿಯ ಮನೆ ಇಲ್ಲದಿದ್ದರೆ ಅಂತಹ ಸಂಧರ್ಬದಲ್ಲಿ ವಿದ್ಯುತ್ ವಾಹಕಗಳು ಹಾದಿರುತ್ತವೆ, ಆದರೆ ನಂತರ ಮನೆ ನಿರ್ಮಾಣವಾಗಿದ್ದಾಗ ವಿದ್ಯುತ್ ಕಂಬವನ್ನು ಸ್ಥಳಾಂತರಸಿಲು ಒದಗುವ ಖರ್ಚು ಗ್ರಾಹಕರೆ ಪಾವತಿಸಬೇಕಾಗುತ್ತದೆ. ಅಥವಾ ಅದು ಟಿ.ಎಮ್.ಸಿ ರವರ ಹೋಣೆಯಾಗಿರುತ್ತದೆ.**

(4)

F-25

Scanned with CamScanner

3. **ಅಂಬಾಸಾ ಕಾಟವಾ** :- ಸದರಿ ಗ್ರಾಹಕರು ಗುಳೇದಗುಡ್ಡದ ನಿವಾಸಿಯಾಗಿದ್ದು ಕೋಳಿ ಫಾರಮ್ ವ್ಯಾಪಾರಸ್ಥರಾಗಿರುತ್ತಾರೆ, ಬೇರೆ ವ್ಯಾಪಾರಸ್ಥರಿಗೆ ನೀಡುವ ಹಾಗೇ ಸರ್ಕಾರದ ಸಹಾಯದ ಧನ ರಿಯಾಯತಿಯನ್ನು ಕೋಳಿ ಫಾರಮ್ ಉದ್ಯೋಗ ಮಾಡುವರಿಗೆ ಸರಕಾರದಿಂದ ಯಾವದಾದರು ಒಂದು ಸಹಾಯದ ಧನದ ರಿಯಾಯತಿನ್ನು ನೀಡಬೇಕೆಂದು ವಿನಂತಿಸಿರುತ್ತಾರೆ.

- **ಗ್ರಾಹಕರಿಗೆ ನೀಡುವ ಸರಕಾರದ ಯಾವುದೇ ವಿದ್ಯುತ್ ಸಹಾಯ ಧನವು ಕಂಪನಿಯ ಮಟ್ಟದಲ್ಲಿ ನಿರ್ಧರಿಸಲ್ಪಟ್ಟಿರುತ್ತದೆ ಅದ್ದರಿಂದ ತಾವು ಮನವಿ ನೀಡಿದರೆ ಕಂಪನಿಯ ಮಟ್ಟಕ್ಕೆ ತಮ್ಮ ಪತ್ರವನ್ನು ಲಗತ್ತಿಸಿ ರವಾನಿಸಲಾಗುವುದು.**

4. **ಅಮಿತ ಸಿಂಗ್**:- ಕೋಳಿ ಫಾರಮ್‌ಗೆ ನೀಡುವ ವಿದ್ಯುತ್ ವಿದ್ಯುತ್ ವ್ಯತಯ ಉಂಟಾಗುತ್ತಿರುತ್ತಿದ್ದೆ ಅದ ಕಾರಣ ಸರಿಯಾಗಿ 24*7 ವಿದ್ಯುತ್‌ನ್ನು ನೀಡಬೇಕೆಂದು ವಿನಂತಿಸಿರುತ್ತಾರೆ.

- **ಸದರಿ ಸ್ಥಾವರಗಳನ್ನು ಸಂಬಂಧಿಸಿದ ಶಾಖಾಧಿಕಾರಿಗಳೊಂದಿಗೆ ಚರ್ಚಿಸಿ ಸ್ಥಳಕ್ಕೆ ಬೇಟಿ ನೀಡಿ ಮಾಹಿತಿಯನ್ನು ಒದಗಿಸಲು ಸೂಚಿಸಲಾಗಿದೆ. ಹಾಗೂ ವಿದ್ಯುತ್ ವ್ಯತಯವಾಗದೇ ನೋಡಿಕೊಳ್ಳಲು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ತಿಳಿಸಲಾಗಿದೆ.**

5. **ವಿಠ್ಠಲ್ ಗುರಂ**:- ಹೆಸ್ಕಾಂ ಕಂಪನಿಯು ಗ್ರಾಹಕರಿಗೆ ನೀಡುವ ವಿದ್ಯುತ್ ಬಿಲ್ ನಮೂನೆಯು ಸರಿಯಾದ ನಿಗದಿತ ನಮೂನೆ ಇಲ್ಲದೇ ಇರುವ ಕಾರಣ ಗ್ರಾಹಕರಿಗೆ ತೊಂದರೆ ಉಂಟಾಗುತ್ತಿದೆ ಹಾಗೂ ಸದರಿ ನಮೂನೆಯನ್ನು ಸರಿಪಡಿಸಬೇಕೆಂದು ವಿನಂತಿಸಿರುತ್ತಾರೆ.

- **ಗ್ರಾಹಕರಿಗೆ ನೀಡುವ ವಿದ್ಯುತ್ ಬಿಲ್ ನಮೂನೆಯು ಕಂಪನಿಯ ಮಟ್ಟದಲ್ಲಿ ನಿರ್ಧಸಲಪಟ್ಟಿರುತ್ತದೆ ಅದ ಕಾರಣ ತಮ್ಮ ಮನವಿಯನ್ನು ಕಂಪನಿಯ ಮಟ್ಟದಲ್ಲಿ ನೀಡಿದರೆ ಬಗೆಹರಿಸಲ್ಪಡುವುದು.**

6. **ಪಿ.ಎಚ್.ಗೌಡರ**:- ತಹಶೀಲ್ದಾರ್ ಕಚೇರಿಯ ಸುತ್ತ ಮುತ್ತ ವ್ಯಾಪ್ತಿಗೆ ಬರುವ ವಿದ್ಯುತ್ ಸ್ಥಾವರಗಳು ಕೋಟೆಕಲ್ ಗ್ರಾಮದ ಫೀಡರ್‌ನಿಂದ ಬಂದಿದ್ದು ಇದರಿಂದ ನಡುವೆ ವಿದ್ಯುತ್ ವ್ಯತಯ ಬಹಳ ಉಂಟಾಗುತ್ತಿದೆ ಅದಕಾರಣ ಸದರಿ ಸ್ಥಾವರಗಳಿಗೆ ಸಿ.ಟಿ. ಲೈನ್‌ನಿಂದ ನಿರಂತರವಾಗಿ ವಿದ್ಯುತ್ ನೀಡಬೇಕೆಂದು ವಿನಂತಿಸಿರುತ್ತಾರೆ. ಹಾಗೂ ರಸ್ತೆಯಲ್ಲಿ ವಿದ್ಯುತ್ ಕಂಬಗಳು ಮಧ್ಯದಲ್ಲಿ ಇರುವ ಕಾರಣ ಬೇರೆ ಕಡೆಗೆ ಸ್ಥಳಾಂತರಿಸಬೇಕೆಂದು ಕೇಳಿಕೊಂಡಿರುತ್ತಾರೆ.

- **ವಿದ್ಯುತ್ ವ್ಯತಯ ಬಗ್ಗೆ ಸದರಿ ಸ್ಥಾವರಗಳ ಗ್ರಾಹರು ಸಂಬಂಧಪಟ್ಟ ಹೆಸ್ಕಾಂ ಕಚೇರಿಗೆ ನಿಗದಿತ ಅರ್ಜಿ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕೆಂದು ತಿಳಿಸಿಲಾಗಿದೆ. ಹಾಗೂ ರಸ್ತೆಯ ಮಧ್ಯದಲ್ಲಿ ಇರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ಟಿ.ಎಮ್.ಸಿ ರವರಿಗೆ ಅರ್ಜಿಯನ್ನು ನೀಡಬೇಕೆಂದು ತಿಳಿಸಲಾಗಿದೆ. ಹಾಗೂ ಸ್ಥಳಾಂತರಿಸುವ ತಗಲುವ ಖರ್ಚು ಟಿ.ಎಮ್.ಸಿ ರವರೇ ಪಾವತಿಸಬೇಕಾಗುತ್ತದೆ.**

7. **ಸಿದ್ದಪ್ಪ ಗೌಡರ** :- ಸದರಿ ಗ್ರಾಹಕರ ಹೊಲದಲ್ಲಿ ವಿದ್ಯುತ್ ಎಚ್.ಟಿ ಲೈನ್ ಹಾದು ಹೋಗಿರುತ್ತದೆ ಅದನ್ನು ಪರ್ಯಾಯ ಮಾರ್ಗದಿಂದ ಹಾಕಬೇಕೆಂದು ವಿನಂತಿಸಿರುತ್ತಾರೆ.

- **ಸದರಿ ವಿದ್ಯುತ್ ವಾಹಕಗಳನ್ನು ಎಳೆಯುವ ಎಲ್ಲ ಕಾರ್ಯಗಳು ಕಂಪನಿಯ ಟೆಂಡರ್ ಮುಖಾಂತರವಾಗಿರುತ್ತದೆ. ಅದನ್ನು ನಮ್ಮ ಮಟ್ಟಲದಲ್ಲಿ ಬದಲಾಯಿಸಲು ಸಾಧ್ಯವಿಲ್ಲವೆಂದು ತಿಳಿಸಲಾಗಿದೆ.**

8. **ಕಿರಣ ಬಾಪ್ರೇ**:- ವಿದ್ಯುತ್ ವಾಯರ್‌ಗಳಿಗೆ ಪ್ಲಾಸ್ಟಿಕ್‌ನ್ನು ಹಾಕುವ ವೆಚ್ಚ ಹಾಗೂ ಜವಾಬ್ದಾರಿಯು ಹೆಸ್ಕಾಂ ಕಂಪನಿದಾಗಿರುತ್ತದೆ, ನಮ್ಮ ಮನೆಯ ಮುಂದೆ ವಿದ್ಯುತ್ ವಾಹಕಗಳು ಅಪಾಯ ಮಟ್ಟದಲ್ಲಿ ಹಾದು ಹೋಗಿರುತ್ತದೆ ಅದ ಕಾರಣ ವಾಹಕಗಳಿಗೆ ಪ್ಲಾಸ್ಟಿಕ್ ಪೈಪ್‌ಗಳನ್ನು ಹಾಕಬೇಕೆಂದು ತಮ್ಮಲ್ಲಿ ವಿನಂತಿಸಲಾಗಿದೆ.

- **ವಿದ್ಯುತ್ ವಾಹಕಗಳಿಗೆ ಯಾವುದೇ ರೀತಿಯ ಪ್ಲಾಸ್ಟಿಕ್ ಪೈಪ್‌ಗಳನ್ನು ಹಾಕುವುದು ತಪ್ಪು ಮತ್ತು ಸದರಿ ಕಾರ್ಯದ ವೆಚ್ಚ ಕಂಪನಿ ನೀಡುವದಿಲ್ಲಾ ಎಂದು ತಿಳಿಸಿದಲಾಗಿದೆ.**

ಮುಂದುವರೆದ ಈ ಮೇಲೆ ತಿಳಿಸಿದ ಹಾಗೂ ಗ್ರಾಹಕರ ಜೋತೆಗೆ ಚರ್ಚಿಸಿದ ವಿಷಯಗಳನ್ನು ಅನುಷ್ಠಾನಗೊಳಿಸಲು ಸೂಚಿಸಿ ಸಭೆಯನ್ನು ವಂದನೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)**
**ಕಾ & ಪಾ ಉಪ ವಿಭಾಗ ಹುವಿಸಕಂನಿ, ಗುಳೇದಗುಡ್ಡ**

28/9/2020

<u>ಪ್ರತಿಯನ್ನು ಗೌರವಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.</u>

- ಮಾನ್ಯ ಅಧೀಕ್ಷಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನೆ ವೃತ್ತ ಕಛೇರಿ ಹು.ವಿ.ಸ.ಕಂ.ನಿ ಬಾಗಲಕೋಟ.
- ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನೆ ವಿಭಾಗ ಹು.ವಿ.ಸ.ಕಂ.ನಿ ಬಾಗಲಕೋಟ.

<u>ಪ್ರತಿಯನ್ನು ಮಾಹಿತಿಗಾಗಿ:</u>

- ಶಾಖಾಧಿಕಾರಿಗಳು/ಗುಳೇದಗುಡ್ಡ/ಬಾದಾಮಿ/ಕೆರೂರು/ಬೇಲೂರು/ಕಟಗೇರಿ/ಕುಳಗೇರಿ/ನಂದಿಕೇಶ್ವರ
- ಪ್ರಧಾನ ಕಡತಕ್ಕೆ.

Scanned with CamScanner